ದಿನಾಂಕಃ 04.02.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಸ್.ಡಿ. ವಕೀಲರಿಂದ:**

ದಾವಾ ಸ್ವತ್ತು ನನಗೆ ನನ್ನ ತಂದೆಯಿಂದ ಬಂದಿರುತ್ತದೆ. ನನ್ನ ತಂದೆಂಯಿಂದ ದಾವಾ ಜಮೀನು ನನಗೆ ಬಂದ ನಂತರದಲ್ಲಿ ನಾನು ಒಂದು ಬಾರಿ ಸರ್ವೇಗೆ ಕೊಟ್ಟಿರುತ್ತೇನೆ. ನನ್ನ ಅರ್ಜಿಯ ಬಾಬ್ತು 14.01.2022 ರಂದು ಒಂದು ಬಾರಿ ದಾವಾ ಜಮೀನಿನ ಸರ್ವೇಯನ್ನು ಮಾಡಿರುತ್ತಾರೆ. ಸದರಿ ಸರ್ವೇ ಬಾಬ್ತು ನಕ್ಷೆಯನ್ನು ನ್ಯಾಯಾಲಯದ ಮುಂದೆ ಹಾಜರುಮಾಡಿರುತ್ತೇನೆ. ಬಂಕೇನಹಳ್ಳಿಯ ಗಡಿ ನನ್ನ ಜಮೀನಿನ ಪೂರ್ವ ದಿಕ್ಕಿಗೆ ಬರುತ್ತದೆ. ದಾವಾ ಜಮೀನಿನ ಅನ್ಯಕ್ರಾಂತವನ್ನು ಮಾಡಿಸಿರುವುದಿಲ್ಲ. ಕಿಟ್ಟಯ್ಯ ರವರಿಗೆ ಅವರ ತಂದೆಯಾದ ಹೊನ್ನಯ್ಯ ರವರಿಂದ ದಾವಾ ಜಮೀನು ಬಂದಿರುತ್ತದೆ. ಅದೇ ರೀತಿ ಹೊನ್ನಯ್ಯ ರವರ ತಂದೆಯಿಂದ ಹೊನ್ನಯ್ಯ ರವರಿಗೆ ದಾವಾ ಜಮೀನು ಬಂದಿರುತ್ತದೆ. ಸದರಿ ವಿಷಯವನ್ನು ದಾವಾ ಹೂಡುವ ಪೂರ್ವದಲ್ಲಿ ನಮ್ಮ ವಕೀಲರಿಗೆ ತಿಳಿಸಿರುತ್ತೇನೆ. ದಾವಾ ಜಮೀನಿನಲ್ಲಿ 2 ಗುಂಟೆ ಜಾಗವನ್ನು ಈ ಹಿಂದೆ ನನ್ನ ತಂದೆಯವರು ಶಾಲೆಗೆ ದಾನ ಮಾಡಿರುತ್ತಾರೆ. ಸಾಕ್ಷಿಯು ಮುಂದುವರೆದು ಶಾಲೆಯು ದಾವಾ ಸ್ವತ್ತಿನ ಪೂರ್ವದಿಕ್ಕಿಗಿರುತ್ತದೆ ಎಂದು ನುಡಿಯುತ್ತಾರೆ. ಶಾಲೆಯು ಬಂಕೇನಹಳ್ಳಿಯ ಗಡಿಗೂ ಮುಂಚಿತವಾಗಿಯೂ ಇರುತ್ತದೆ. ಸ.ನಂ.2 ರ ದಕ್ಷಿಣ ದಿಕ್ಕಿಗೆ ಬಂಕೇನಹಳ್ಳಿಯ ಗಡಿ ಬರುತ್ತದೆ ಎಂದರೆ ಸರಿಯಲ್ಲ.

ನನ್ನ ವಾದ ಪತ್ರದಲ್ಲಿ ನನ್ನ ತಂದೆಯವರು 1979-80 ರಲ್ಲಿ ದಾವಾ ಸ್ವತ್ತನ್ನು ಕ್ರಯಕ್ಕೆ ಕೊಂಡಿರುತ್ತಾರೆ ಎಂದು ನಮೂದಿಸಿರುತ್ತೀರ ಎಂದರೆ ಸರಿ. ದಾವೆಯಲ್ಲಿ ತೋರಿಸಿರುವ ಚೆಕ್ಕುಬಂದಿಗೆ ಆಧಾರವಾಗಿ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ಸ.ನಂ.2/7 ರಲ್ಲಿ 1 ಎಕರೆ 12 ಗುಂಟೆ ಜಮೀನನ್ನು ನನ್ನ ತಂದೆಯವರು ಕ್ರಯಕ್ಕೆ ಪಡೆದಿರುತ್ತಾರೆ. 40 ರಿಂದ 50 ವರ್ಷಗಳ ಹಿಂದೆ ನನ್ನ ತಂದೆಯು ಶಾಲೆಗೆ ಜಮೀನನ್ನು ದಾನ ಮಾಡಿರುತ್ತಾರೆ. ಸದರಿ ದಾನ ಪತ್ರವನ್ನು ನಾನು ನ್ಯಾಯಾಲಯದ ಮುಂದೆ ಹಾಜರು ಮಾಡಿರುತ್ತೇನೆ. ನಿಪಿ-1 ರಲ್ಲಿ ಶಾಲೆಗೆ ದಾನ ಕೊಟ್ಟಿರುವ ಬಾಬ್ತು ನಮೂದಿಸಿರುವುದಿಲ್ಲ ಎಂದರೆ ಸರಿ. ನನ್ನ ತಂದೆಯವರು ದಾನ ಕೊಟ್ಟ ಬಾಬ್ತು ನನ್ನ ಬಳಿ ಯಾವುದೇ ದಾಖಲಾತಿ ಇರುವುದಿಲ್ಲ. ನಿಪಿ-6 ರಲ್ಲಿ ನಮೂದಿಸಿರುವ ಚೆಕ್ಕುಬಂದಿಯನ್ನು ದಾವಾ ಶೆಡ್ಯೂಲ್ ನಲ್ಲಿ ನಮೂದಿಸಲು ಯಾವುದೇ ತೊಂದರೆ ಇರಲಿಲ್ಲ. ದಾವಾ ಸ್ವತ್ತಿನ ದಕ್ಷಿಣ ದಿಕ್ಕಿಗೆ ಸ.ನಂ.2/4 ರ ಜಮೀನು ಬರುತ್ತದೆ. ಸದರಿ ಜಮೀನು ನನಗೆ ಸೇರಿರುತ್ತದೆ. ಸದರಿ ಜಮೀನನ್ನು ನನ್ನ ತಂದೆಯವರು ಖರೀದಿಸಿರುತ್ತಾರೆ. ದಾವಾ ಶೆಡ್ಯೂಲ್ ನಲ್ಲಿ ದಕ್ಷಿಣ ದಿಕ್ಕಿಗೆ ನನ್ನದೇ ಜಮೀನು ಎಂದು ತೋರಿಸಿರುವುದಿಲ್ಲ. ದಾವಾ ಸ್ವತ್ತಿನ ಉತ್ತರ ದಿಕ್ಕಿಗೆ ಕೃಷ್ಣೇಗೌಡರ ಜಮೀನು ಬರುತ್ತದೆ. ನಿಪಿ-6 ರಲ್ಲಿ ಪೂರ್ವ ಮತ್ತು ಪಶ್ಚಿಮ ದಿಕ್ಕಿಗೆ ಕೃಷ್ಣೇಗೌಡರ ಜಮೀನು ಇದೆ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿಗೆ ನಿಂಗಯ್ಯ ರವರ ಜಮೀನು ಬರುತ್ತದೆ. ದಾವಾ ಸ್ವತ್ತಿನ ದಕ್ಷಿಣ

ದಿಕ್ಕಿಗೆ ಸುಬ್ಬೇಗೌಡ ರವರ ಜಮೀನು ಬರುತ್ತದೆ. ಸದರಿ ವಿಷಯವನ್ನು ನನ್ನ ವಾದ ಪತ್ರದಲ್ಲಿ ತೋರಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಿಪಿ-7 ಸ.ನಂ.2/1 ಕ್ಕೆ ಸಂಬಂಧಿಸಿರುತ್ತದೆ ಎಂದರೆ ಸರಿಯಲ್ಲ. ನಿಪಿ-7 ರ ಉತ್ತರ ದಿಕ್ಕಿಗೆ ಸ.ನಂ.75 ರ ಜಮೀನು ಬರುತ್ತದೆ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ಅದೇ ರೀತಿ ದಕ್ಷಿಣಕ್ಕೆ ಬಂಕೇನಹಳ್ಳಿ ಗ್ರಾಮ ಎಂದು ನಿಪಿ-7 ರಲ್ಲಿ ನಮೂದಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸುವ ಪೂರ್ವದಲ್ಲಿ ನಿಪಿ-7 ನ್ನು ಪರಿಶೀಲಿಸಿರುತ್ತೇನೆ. ಪ್ರತಿವಾದಿಯವರು ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಬರುತ್ತಾರೆ. ಸದರಿಯವರ ಜಮೀನಿನ ಸ.ನಂ.2/6 ಆಗಿರುತ್ತದೆ. ಸದರಿ ವಿಷಯದ ಕುರಿತು ವಾದ ಪತ್ರದಲ್ಲಿ ನಮೂದಿಸಿರುತ್ತೇನೆ. ಪ್ರತಿವಾದಿಯವರು ದಕ್ಷಿಣ ದಿಕ್ಕಿನಿಂದ ನನ್ನ ಜಮೀನಗೆ ಅತಿಕ್ರಮ ಪ್ರವೇಶ ಮಾಡಲು ಪ್ರಯತ್ನಿಸಿರುತ್ತಾರೆ. ದಾವಾ ಸ್ವತ್ತಿನ ದಕ್ಷಿಣ ದಿಕ್ಕಿಗೆ ಇರುವ ಸ.ನಂ. ನನಗೆ ನೆನಪಿರುವುದಿಲ್ಲ. ದಕ್ಷಿಣ ದಿಕ್ಕಿನಲ್ಲಿರುವ ಜಮೀನಿಗೆ ಹೋಗಲು ನನ್ನ ಜಾಗದಲ್ಲಿಯೇ ಡಾಂಬಾರು ರಸ್ತೆ ಇರುತ್ತದೆ. ಸದರಿ ರಸ್ತೆಯು ನನ್ನ ಜಮೀನಿನಲ್ಲಿ 200 ರಿಂದ 300 ಅಡಿ ಉದ್ದವಿರುತ್ತದೆ.

ಸದರಿ ವಿಷಯವನ್ನು ನನ್ನ ವಾದ ಪತ್ರದಲ್ಲಿ ನಮೂದಿಸಿರುವುದಿಲ್ಲ. ಪ್ರತಿವಾದಿಯವರ ಹೆಸರಿನಲ್ಲಿ ಒಂದು ಮನೆ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿರುವ ಮನೆಯಲ್ಲಿ ನಾನೇ ಹಾಲಿ ವಾಸಿಸುತ್ತಿರುತ್ತೇನೆ. ಸದರಿ ಮನೆಯ ಸುಮಾರು 200 ವರ್ಷದ ಹಳೆಯದ್ದಾಗಿರುತ್ತದೆ. ನಿಪಿ-6 ರ ಕ್ರಯ ಪತ್ರದಲ್ಲಿ ಹಳೇ ಮನೆ ಇರುವ ಬಗ್ಗೆ ನಮೂದಿಸಿರುವುದಿಲ್ಲ. ಸದರಿ ಮನೆಯು 30*40 ಅಳತೆಯ ವಿಸ್ತೀರ್ಣವಿರಬಹುದು. ಸದರಿ ವಿಷಯದ ಕುರಿತು ನನ್ನ ವಾದ ಪತ್ರದಲ್ಲಿ ಹೇಳಿರುತ್ತೇನೆ. ಮನೆಗೆ ಸಂಬಂಧಿಸಿದಂತೆ ದಾಖಲಾತಿಯನ್ನು ನಾನು ಹಾಜರುಪಡಿಸಿರುತ್ತೇನೆ. ನಾನು ಹಾಜರು ಮಾಡಿರುವ ನಿಪಿ-4 ಮತ್ತು 5 ರಲ್ಲಿ ಮನೆ ಇರುವ ಬಗ್ಗೆ ನಮೂದಿರುವುದಿಲ್ಲ ಎಂದರೆ ಸರಿ. ಮನೆ ಇರುವ ಬಾಬ್ತು ಫೋಟೋವನ್ನು ಹಾಜರುಪಡಿಸಿರುತ್ತೇನೆ. ನಿಪಿ-12 ರಲ್ಲಿ ಮನೆ ಇರುವ ಬಗ್ಗೆ ಕುರುಹುಗಳು ಇಲ್ಲ ಎಂದರೆ ಸರಿ. ದಾವಾ ಜಮೀನಿನ ಪಶ್ಚಿಮ ದಿಕ್ಕಿಗೆ ಮನೆ ಇರುತ್ತದೆ. ಡಾಂಬಾರು ರಸ್ತೆಯ ದಾವಾ ಜಮೀನಿನ ದಕ್ಷಿಣ ದಿಕ್ಕಿಗೆ ಬರುತ್ತದೆ. ದಾವಾ ಜಮೀನಿನಲ್ಲಿ ನಾವು ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಯಾವುದೇ ಮನೆ ಅಥವಾ ಶಾಲೆ ಇರುವುದಿಲ್ಲ ಎಂದರೆ ಸರಿಯಲ್ಲ. ಸ.ನಂ.2/7 ರಲ್ಲಿ ಇಂದಿಗೂ ಪ್ರತಿವಾದಿಯವರೇ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

ಒಂದು ವೇಳೆ ನಾನು ದಾವಾ ಜಮೀನಿನಲ್ಲಿ ಸ್ವಾಧೀನದಲ್ಲಿದ್ದರೆ ಸರಿಯಾದ ಚೆಕ್ಕುಬಂದಿಯನ್ನು ಹಾಜರುಪಡಿಸುತ್ತಿದ್ದೆ ಎಂದರೆ ಸಾಕ್ಷಿಯು ಚೆಕ್ಕುಬಂದಿಯು ಸರಿಯಾಗಿರುತ್ತದೆ ಎಂದು ನುಡಿಯುತ್ತಾರೆ. ದಿ.28.09.2022 ರಂದು ಪ್ರತಿವಾದಿಯವರು ನಮ್ಮ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಲು ಪ್ರಯತ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳು ಪ್ರತಿವಾದಿಯವರ ಜಮೀನನ್ನು ಕಬಳಿಸುವ ಉದ್ದೇಶದಿಂದ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣವಿರುವುದಿಲ್ಲ ಎಂದರೆ ಸರಿಯಲ್ಲ.

ಅ.ದಾ. 94/2022 ಪಿಡಬ್ಲ್ಯೂ-1

**<u>ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.